ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು). –

ಅ) ಬಂದಿವೆ.

ಆ) ಇದರಿಂದ ರೋಗಿಗಳಿಗೆ ತೊಂದರೆ ಆಗುತ್ತಿಲ್ಲ. ಏಕೆಂದರೆ ದರಗುತ್ತಿಗೆ ಆಧಾರದ ಮೇಲೆ ಸಾಕಷ್ಟು ಐ. ವಿ. ದ್ರಾವಣ ಖರೀದಿಸಲಾಗುತ್ತಿದ್ದು ಮತ್ತು ಮಂಡ್ಯ ಜಿಲ್ಲಾ ಆಸ್ಪತ್ರೆಯ ಐ. ವಿ. ದ್ರಾವಣ ತಯಾರಿಕಾ ಘಟಕ ಲೈಸೆನ್ಸ್ ಪಡೆದಿದ್ದು, ಅಲ್ಲಿಂದಲೂ ಸಹ ಪೂರೈಕೆಯಾಗುತ್ತಿದೆ.

ಇ) ಔಷಧ ಮತ್ತು ಕಾಂತಿವರ್ಧಕ ನಿಯಮಗಳ ಪ್ರಕಾರ ಔಷಧ ನಿಯಂತ್ರಣಾಧಿಕಾರಿಗಳು ಪರವಾನಗಿಯನ್ನು ಕಡ್ಡಾಯ ಮಾಡಿರುವ ಸಲುವಾಗಿ ಕೆ. ಆರ್. ಆಸ್ಪತ್ರೆ, ಮೈಸೂರಿನಲ್ಲಿ ಐ. ವಿ. ದ್ರಾವಣ ತಯಾರಿಕೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ. ಪರವಾನಗಿ ಷರತ್ತುಗಳನ್ನು ಪೂರೈಸಲು ಔಷಧ ನಿಯಂತ್ರಣಾಧಿಕಾರಿಗಳ ಸಲಹೆಯ ಮೇರೆಗೆ ಹಾಲಿ ಫಾರ್ಮಸಿ ವಿಭಾಗದಲ್ಲಿ ಮತ್ತು ಆಕ್ಕಪಕ್ಕದ ಕೊಠಡಿಗಳಲ್ಲಿ ಲೋಕೋಪಯೋಗಿ ಇಲಾಖಾ ವತಿಯಿಂದ ಕೆಲವು ಕಾಮಗಾರಿಗಳನ್ನು ಕೊಡಿಸಲು ಕ್ರಮ ಕೈಗೊಳ್ಳಲಾಗಿದೆ. ಆದಷ್ಟು ಆದ್ಯತೆ ಕೊಟ್ಟು ಇನ್ನೂ ೬ ತಿಂಗಳಲ್ಲಿ ಪರವಾನಗಿ ಷರತ್ತುಗಳನ್ನು ಪೂರೈಸಿ ತಯಾರಿಕೆಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆ.

ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಯ ಸೌಲಭ್ಯಗಳ ಬಗ್ಗೆ

೮೬೮(೧೨೪೭) ಶ್ರೀ ಹರ್ಷಕುಮಾರ್ ಗೌಡ (ಚಾಮರಾಜ).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಮೈಸೂರು ನಗರದ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ

೧) ಡಯಾಲಿಸಿಸ್ ಉಪಕರಣ

೨) ಇ. ಸಿ. ಜಿ.

೩) ಎಕ್ಸ್‌ರೇ ಉಪಕರಣಗಳು.

೪) ಎಕ್ಸ್‌ರೇ ಫಿಲಂಗಳು ಇವೆಯೆ?

ಆ) ಈ ಆಸ್ಪತ್ರೆಗೆ ಸಕಾಲದಲ್ಲಿ ಔಷಧಿಗಳನ್ನು ಕೊಡದಿರಲು ಕಾರಣವೇನು?

ಇ) ಈ ಆಸ್ಪತ್ರೆಯ ಸ್ವಚ್ಛತಾ ವ್ಯವಸ್ಥೆಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಇವೆ.

ಆ) ಔಷಧಿ ಕೊರತೆ ಇಲ್ಲ.

ಇ) ಅವಶ್ಯವಿರುವ ಎಲ್ಲಾ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಗುಂಡ್ಲುಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿರುವ ಸೌಲಭ್ಯಗಳು

೮೬೯(೧೨೦೨) ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ : —

ಅ) ಗುಂಡ್ಲುಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ನಿರೀಕ್ಷಣಾ ಕೊಠಡಿ ಸಿಬ್ಬಂದಿ ವಸತಿ ಸೌಕರ್ಯ ಮತ್ತು ವೈದ್ಯರ ಕೊರತೆ ಕ್ಷ–ಕಿರಣದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದನ್ನು ಪರಿಹರಿಸಲು ಸರ್ಕಾರದವರು ಈ ವರೆಗೆ ಕೈಗೊಂಡಿರುವ ಕ್ರಮಗಳೇನು, ಹಾಗೂ ಎಷ್ಟು ದಿನಗಳಲ್ಲಿ ಇದನ್ನು ಸರಿಪಡಿಸಲಾಗುವುದು?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಈ ಆಸ್ಪತ್ರೆಯಲ್ಲಿ ಸುಮಾರು ೩೦ ರಿಂದ ೫೦ ರೋಗಿಗಳು ಉಳಿತುಕೊಳ್ಳುವಂತಹ ನಿರೀಕ್ಷಣಾ ಕೊಠಡಿ ಇದ್ದು. ಕ್ಷ–ಕಿರಣದ ಸೌಲಭ್ಯವೂ ಇದೆ. ಆದರೆ ಕೆಲವು ಸಿಬ್ಬಂದಿಗೆ ವಸತಿ ಸೌಲಭ್ಯಗಳು ಇರುವುದಿಲ್ಲ. ಹಾಗೂ ಕೆಲವು ಖಾಲಿ ಹುದ್ದೆಗಳು ಇರುತ್ತವೆ.

ಆ) ವಸತಿ ಸೌಲಭ್ಯವನ್ನು ಉಳಿದ ಸಿಬ್ಬಂದಿಗೆ ಒದಗಿಸುವ ಹಾಗೂ ಖಾಲಿ ಇರುವ ಹುದ್ದೆಗಳನ್ನು ತುಂಬುವ ಬಗ್ಗೆ ಪರಿಶೀಲನೆಯಲ್ಲಿದೆ.

ಕುಂದಾಪುರ ಆಸ್ಪತ್ರೆಯ ವೈದ್ಯರ ಮತ್ತು ಸಿಬ್ಬಂದಿ ಕೊರತೆ

೮೭೦(೧೦೭೯) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕುಂದಾಪುರ ಸರ್ಕಾರಿ ಆಸ್ಪತ್ರೆಗೆ ಮಂಜೂರಾದ ವೈದ್ಯರ ಮತ್ತು ಸಿಬ್ಬಂದಿಗಳ ಸಂಖ್ಯೆ ಎಷ್ಟು? (ಹುದ್ದೆವಾರು ವಿವರ ನೀಡುವುದು)

ಆ) ಈಗ ಇರುವ ವೈದ್ಯರ ಮತ್ತು ಸಿಬ್ಬಂದಿಗಳ ಸಂಖ್ಯೆ ಎಷ್ಟು? (ಹುದ್ದೆವಾರು ವಿವರ)

ಇ) ಈಗ ಕೊರತೆ ಇರುವ ವೈದ್ಯರ ಮತ್ತು ಸಿಬ್ಬಂದಿಗಳ ಸಂಖ್ಯೆ ಎಷ್ಟು?

ಈ) ಈ ವೈದ್ಯರ ಮತ್ತು ಸಿಬ್ಬಂದಿಗಳ ಕೊರತೆಯನ್ನು ಯಾವಾಗ ತುಂಬಲಾಗುವುದು?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು),—

ಅ) ಕುಂದಾಪುರ ಸರ್ಕಾರಿ ಆಸ್ಪತ್ರೆಗೆ ಮಂಜೂರಾದ ವೈದ್ಯರ ಮತ್ತು ಸಿಬ್ಬಂದಿಗಳ ಸಂಖ್ಯೆ ೩೯. ಹುದ್ದೆವಾರು ವಿವರಣೆಯನ್ನು ಅನುಬಂದ ರಲ್ಲಿ ಲಗತ್ತಿಸಿದೆ.

ಆ) ಅನುಬಂಧದಲ್ಲಿ ವಿವರಣೆ ನೀಡಲಾಗಿದೆ.

ಇ) ೧) ಸಹಾಯಕ ಶಸ್ತ್ರ ಚಿಕಿತ್ಸಕರ ಹುದ್ದೆ ೨

೨) ಹಿರಿಯ ಔಷಧಿ ತಜ್ಞ ೧

೩) ಹಿರಿಯ ಪ್ರಯೋಗಶಾಲೆ ತಜ್ಞ ೧

೪) ಕ್ಷ–ಕಿರಣ ಸಹಾಯಕರು ೨

೫) 'ಡಿ' ಗುಂಪಿನ ನೌಕರರು ೨

೬) ಬೆರಳಚ್ಚುಗಾರರು : ೧
ಗುಮಾಸ್ತರು

ಈ) ಆದಷ್ಟು ಬೇಗ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದು.